ಅಷ್ಟರಲ್ಲಿ ಪೊಲೀಸ್ ಕಂಪ್ಲೇಂಟ್ ಕೂಡ ದಾಖಲಾಯ್ತು. ರೊಡ್ರಿಗ್ಸ್ ಸರ್ 'ಥೈ ವಚಾ, ಕೋಣ್ ತ್ಯಾಜೆರ್ ಮಾರ್ಲೆ ಪಳಯಾ' ಎಂದು ಕಳುಹಿಸಿದ್ದ ನಾಲ್ಕಾರು ಹುಡುಗರು ಬೀಚಿನಲ್ಲಿ ಸುತ್ತಾಡಿ ಈ ಕೃತ್ಯ ಎಸಗಿದವರ ಸುಳಿವು ಸಿಗದೇ ಬರಿಗೈಲಿ ಬಂದಿದ್ದರು. ಪೊಲೀಸರು ನಿಮಗೆ ಯಾರ ಮೇಲಾದರೂ ಸಂಶಯವಿದ್ರೆ ಹೇಳಿ ಎಂದಿದ್ದರು. ರೊಡ್ರಿಗ್ಸ್ ಸರ್, 'ಆ ಹುಡುಗ ಅಜಾತಶತ್ರು, ಈ ಹುಡುಗಿಯ ಮೇಲಿನ ದ್ವೇಷವೇನಾದರೂ ಇರಬಹುದೇ ಕೇಳಿ' ಅಂದರು. 'ಹುಡುಗಿಯರ ಸಾವಾಸ ಮಾತ್ರ ಮಾಡಬೇಡಾ ಅಂದೆ, ಕೇಳಿದ್ನಾ? ಹಿ ಕುಡ್ ಗೋ ಟು ನ್ಯಾಶನಲ್ ಲೆವೆಲ್... ಈ ಘಾಟೀ ಹುಡುಗಿಯಿಂದ್ಲೇ ಇತ್ಲೆವಟೂ ಭಾನಗಡಿ ಝಾಲಿ' ಅಂದರು. ಪ್ರೀತಂ ಅವರ ಕೈಗಳನ್ನು ಮೆಲ್ಲನೆ ಒತ್ತಿ, ಕಣ್ಣುಗಳಲ್ಲೇ ಅವಳ ಮನ ನೋಯಿಸಬೇಡಿ ಎಂಬಂತೆ ಯಾಚಿಸಿದ. ರೊಡ್ರಿಗ್ಸ್ ಸರ್ ಮನಸ್ಸು ಮೆತ್ತಗಾಯಿತು. 'ಐ ಆಮ್ ಸಾರಿ' ಅಂದ್ರು. ಸುಮಿ ಇನ್ನೂ ಎಂಥ ಮನಸ್ಥಿತಿಯಲ್ಲಿದ್ದಳೆಂದರೆ ರೊಡ್ರಿಗ್ಸ್ ಸರ್ ಮಾತುಗಳು ಏನೂ ಪರಿಣಾಮ ಉಂಟುಮಾಡಲಿಲ್ಲ. ಅವಳ ಮೌನವನ್ನು ಕಂಡು ಗುಲಾಬಿಯೇ ಅವಳ ಹತ್ತಿರ ಹೋಗಿ 'ನೀ ಎಂತಕೆ ಬೇಜಾರ ಮಾಡ್ತಿ ಮಗಾ... ಅಂವ್ನ ಜೀವ ಉಳಿಸಿದೆ ನೀನು' ಅಂದು ತಲೆ ನೇವರಿಸಿದಳು. ಸುಮಿಗಾದ ಆಘಾತ ಮೊದಲ ಬಾರಿಗೆ ಅಳುವಾಗಿ ಹೊರಬಂತು. ಗುಲಾಬಿಯ ಹೆಗಲ ಮೇಲೆ ಮುಖವಿಟ್ಟು ಅತ್ತುಬಿಟ್ಟಳು. ಅಷ್ಟರಲ್ಲಿ ವಿರುಪಾಕ್ಷಿ ಬುಲ್ಲೆಟ್ ಮೇಲೆ ಬಂದು ಹೆಚ್ಚು ಮಾತಿಲ್ಲದೇ ಸುಮಿಯನ್ನು ಕರೆದೊಯ್ದ. ಸುಮಿಗೆ ಅಲ್ಲಿ ಇನ್ನೊಂದು ಆಘಾತ ಕಾದಿತ್ತು. ಮನೆ ಸಮೀಪಿಸಿದಾಗ ಬೊಲೆರೊ ಗಾಡಿ ಗೇಟ್ ಮುಂದೆ ನಿಂತಿತ್ತು. ಸುಮಿಗೆ 'ಸಂಥಿಂಗ್ ಈಸ್ ರಾಂಗ್' ಎನ್ನುವುದರ ಸುಳಿವು ಹತ್ತಿತು. ಬುಲ್ಲೆಟ್‌ನಿಂದ ಇಳಿದು ಎದುರು ಬಂದು ವಿರುಪಾಕ್ಷಿಯ ಕಣ್ಣುಗಳನ್ನು ದಿಟ್ಟಿಸಿದಳು. ಅವನು ದೃಷ್ಟಿಯನ್ನು ತಿರುಗಿಸಿದ. 'ಯು ಟೂ ಬ್ರೋ?' ಎಂಬ ಉದ್ಗಾರ ಮಾತ್ರ ಹೊರಬಿತ್ತು.

'ಗೋವಾಕೆ ಕ್ರಿಕೆಟ್ ಟೂರ್ನಮೆಂಟಿಗೆ ಹೋಗದ್ನೋ ಮಾರಾಯಾ, ನಂಗೆ ಅಲ್ಲೇ ಸುದ್ದಿ ಗೊತ್ತಾಯ್ತು' ಅಂದ ರೋಹಿತ್. ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಮೇಲೆ ಪ್ರೀತಂನನ್ನು ನೋಡಲು ಅವರ ಮನೆಗೆ ರೋಹಿತ್ ಬಂದಿದ್ದ.

'ಖರೆ ಹೇಳ್ತಿನೋ ಮಾರಾಯಾ... ಶಾಕ್ ಆಯ್ತು' ಅಂದ.

ಸ್ವಲ್ಪ ಹೊತ್ತು ಡಿಟೇಲಾಗಿ ವಿಷಯ ಕೇಳಿ ತಿಳಿದ ಮೇಲೆ, ಪ್ರೀತಂನ ಎರಡೂ ಕೆನ್ನೆ ಹಿಂಡಿ, 'ಮಗ್ನೆ ನಾ ಕಣ್ ಹಾಕಿದ್ ಚಂದ ಮಗುನ ನೀ ಹೈಜಾಕ್ ಮಾಡಿದೆ... ಅದ್ಕೇ ನಿಂಗೆ ಸಮಾ ಆಯ್ತು' ಅಂದು ನಕ್ಕ. ಅವನ ಕಿವಿಯಲ್ಲಿ ಬಗ್ಗಿ 'ಸುಮಿಯಂಥ ಸಮ್ಮಿಗೆ ಹೂ ಅಪ್ಪಿಕೊಳ್ಳುದಾದರೆ ನಾನು ಹಿಂಗೆ ಹೊಡ್ತ ತಿನ್ನೂಕೆ ರೆಡಿ ಮಾರಾಯಾ' ಎಂದು ಕಣ್ಣು ಮಿಟುಕಿಸಿದ. ಪ್ರೀತಂನ ಆಯಿಯತ್ತ ತಿರುಗಿ 'ಗುಲಾಬಕ್ಕ, ಬ್ಯಾಗೆ ಎಂಗೇಜಮೆಂಟ್ ಮಾಡಬಿಡ... ಕದ್ದುಮುಚ್ಚಿ ರೊಮ್ಯಾನ್ಸ್ ಮಾಡುದ ಬಿಟ್ಟು, ಖುಲ್ಲಂಖುಲ್ಲಾ ಲವ್ ಮಾಡ್ಕಂಡಿರಲೆ' ಎಂದ. ಅವನ ಮಾತಿಗೆ ಪ್ರೀತಂನ ಚಿಕ್ಕ ಮನೆಯಲ್ಲಿ ಸೇರಿದ್ದ ಅವನ ಕಾಲೇಜಿನ, ಸ್ಪೋರ್ಟ್ಸ್ ಕ್ಲಬ್ಬಿನ ಗೆಳೆಯರು, ನುಶಿಕೋಟೆಯಿಂದ ಬಂದಿದ್ದ ಗುಲಾಬಿ ಬಳಗದವರು, ಬಿಣಗಾದಿಂದ ಬಂದಿದ್ದ ಗಂಡನ ಕಡೆಯವರು ಎಲ್ಲರೂ ನಕ್ಕರು. ಅಲ್ಲಿವರೆಗೆ ಆಕಾಶವೇ ತಲೆ ಮೇಲೆ ಬಿದ್ದ ಹಾಗೆ ಕೂತಿದ್ದ ಗುಲಾಬಿಯ ಮುಖದ ನರಗಳೂ ಸ್ವಲ್ಪ ಸಡಿಲಾದವು. 'ಸಾಕಮಾಡಾ, ಅಂಕೋಲಿ ಹುಂಬ' ಎಂದು ಹುಸಿಕೋಪ ತೋರಿಸಿ ಎಲ್ಲರಿಗೂ ಅವಲಕ್ಕಿ ಬೆಲ್ಲ ಕಲಿಸಿ ಕೊಟ್ಟಳು.

ಸುಮಿ ಎನ್ನುವ ಹುಡುಗಿ ಪರಿಚಯ ಆದದ್ದನ್ನು ಆಯಿಗೆ ಮಾತುಮಾತಲ್ಲಿ ಸೂಕ್ಷ್ಮವಾಗಿ ಹೇಳಿದ್ದು ಬಿಟ್ಟರೆ, ಪ್ರೀತಂ ಬೇರೆ ಯಾರಿಗೂ ಅದನ್ನು ಇವನಾಗಿಯೆ ಹೇಳಿರಲಿಲ್ಲ. ಈ ಹಲ್ಲೆಯ ಪ್ರಕರಣವು ತನ್ನ ಪ್ರೇಮವನ್ನು ಸ್ವಯಂ ಜಗಜ್ಜಾಹೀರು ಮಾಡಿದ್ದು ಮಾತ್ರವಲ್ಲದೆ, ಆ ಪ್ರೇಮವು ಸಂಬಂಧಿಕರಿಗೂ ಸ್ನೇಹಿತರಿಗೂ ಸ್ವೀಕಾರಾರ್ಹ ಆದಂತೆ ಕಾಣುತ್ತಿರುವುದು ಅವನನ್ನು ಗೆಲುವಾಗಿಸಿತ್ತು. ಎಲಾ ಗಾಯದ ಮಾಯವೇ ಎಂಬ ಸೋಜಿಗದಲ್ಲಿ ಅವನು ನೋವಿನಲ್ಲೂ ಒಳಗೊಳಗೇ ಖುಶಿಯಾಗಿದ್ದ!

ಅವಲಕ್ಕಿ ಸಿಕ್ಕಾಪಟ್ಟೆ ಖಾರಾ ಆಗಿ ಇಸಗುಡುತ್ತಾ ರೋಹಿತ್, 'ಗುಲಾಬಕ್ಕ, ನೀ ಬಯಲುಸೀಮೆ ಹೆಣ್ಣಿನ್ನ ಸೊಸಿ ಮಾಡ್ಕಾ, ನಮ್ಮ ತಕರಾರ್ ಏನೂ ಇಲ್ಲಾ, ಆದ್ರೆ ನಮ್ಗೂ ಈ ನಮೂನಿ ಖಾರಾ ಮೆಣಸ್ ತಿನ್ಸಬೇಡಾ, ಕೈ ಮುಗೀತಿ ಮಾರಾಯ್ತಿ' ಅಂದ. ಮತ್ತೆ ಎಲ್ಲರೂ ನಕ್ಕರು. 'ಹಾನಾ ಗುಲಾಮಾ, ಅಟ್ಟುಂದ ಖಾರಾ ಅಗಿದೇನಾ? ತಡಿ ಹಂಗಾರೆ' ಎಂದು ಗುಣುಬಲ್ಲಿ ಮತ್ತಷ್ಟು ಬೆಲ್ಲ ತಂದು 'ತಕ್ಕಾ, ನಮ್ಮ ಹಿರೇಗುತ್ತಿ ಬೆಲ್ಲವೇ!' ಎಂದು ಅವಲಕ್ಕಿ ಮೇಲೆ ಸುತ್ತು ಹಾಕಿದಳು. ಚಹ ಕುಡಿದ ನಂತರ ರೋಹಿತ್ ಗೆಳೆಯರೊಡನೆ ಗಂಭೀರ ಚರ್ಚೆಗಿಳಿದ.

'ಪ್ರೀತಂನ ಮೇಲೆ ಅಟ್ಯಾಕ್ ಮಾಡಿಸಿದವನು ರೋಹಿತನೇ ಇರಬಹುದು ಅಂತ ಯಾರೋ ಪೊಲೀಸರಿಗೆ ಹೇಳಿದ್ರಂತೆ. ಇಂಥ ಹಲ್ಕಟ್ ಕೆಲ್ಸ ಸರ್ವಥಾ ಮಾಡೂದಿಲ್ಲ. ನಂಗೆ ಆ ಘಾಟೀ ಹುಡುಗಿ ಬಗ್ಗೆ ಒಂಥರಾ ಆಕರ್ಷಣೆ ಇದ್ದದ್ದು ಖರೆ. ಆದರೆ ಇವರಿಬ್ಬರದೂ ರಿಯಲ್ ಲವ್ ಅಂತ ಗೊತ್ತಾದ ಕೂಡಲೇ ತಲೆಯಿಂದ ತೆಗೆದುಹಾಕಿದ್ದೆ...' ಎಂದ.

'ನೋಡಿ, ನಮ್ಮ ಸ್ನೇಹಿತನ ಮೇಲೆ ಹಲ್ಲೆಯಾಗಿದೆ. ಇನ್ನೂ ಯಾರಂತ ಗೊತ್ತಾಗಿಲ್ಲ. ಯಾರನ್ನೂ ಅರೆಸ್ಟ್ ಮಾಡಿಲ್ಲ. ಫ್ರೆಂಡ್ಸ್, ಇದು ನಾವು ಮೌನವಾಗಿರುವ ಸಮಯವಲ್ಲ. ಇಂಥ ಹೇಯ ಕೃತ್ಯವನ್ನು ಪ್ರತಿಭಟಿಸಬೇಕು. ಒಂದು ಮೆರವಣಿಗೆ ಮಾಡುವಾ. ನೋಡಿ, ಇದು ಪ್ರೀತಂ ಮೇಲಿನ ಹಲ್ಲೆ ಮಾತ್ರವಲ್ಲ, ಯಂಗ್ ಜನರೇಶನ್ ಮೇಲಿನ ಇಂಟಾಲರನ್ಸ್. ಅರ್ಥ ಮಾಡಿಕೊಳ್ಳಿ... ಆ ಹುಡುಗಿ ತೋರಿದ ಧೈರ್ಯವನ್ನು ಮೆಚ್ಚಬೇಕು. ಶಿ ಈಸ್ ಅ ಬ್ರೇವ್ ಗರ್ಲ್... ಅವಳಿಂದ ಪ್ರೀತಂ ಬದುಕಿದ, ಅವರ ಪ್ರೀತಿಯನ್ನು ನಾವು ಬದುಕಿಸುವಾ... ನಮ್ಮ ಕಾರವಾರದಲ್ಲಿ ಮತ್ತೆ ಇಂಥದ್ದು ಆಗಬಾರದು... ಮಾಲಾ ಗ್ರೌಂಡಿನಿಂದ ಮೆರವಣಿಗೆ ಹೊರಡೋಣ, ಡಿಸಿ ಆಫೀಸಿಗೆ ಹೋಗಿ ಮನವಿ ಸಲ್ಲಿಸೋಣ. ಲವ್ ಮಾಡೋದು ಪಾಪ ಅಲ್ಲ... ಪರಸ್ಪರ ಮೆಚ್ಚಿದವರು ಅಪ್ಪಿಕೊಂಡರೆ, ಮುದ್ದಾಡಿದರೆ ಅದೇನು ಅಪರಾಧವಲ್ಲ. ಇದು ನೈತಿಕ ಪೊಲೀಸಗಿರಿಯ ಕಿತಾಪತಿ ಆಗಿದ್ದರೆ, ಅದನ್ನು ಖಂಡಿಸೋಣ, ಧಿಕ್ಕಾರ ಹಾಕೋಣ...' ಅಂದ.

'ಹೇಯ್ ಸಚಿನ್, 'ಹ್ಯಾಶ್ ಟ್ಯಾಗ್ ಕಂಡೆಮ್ ಲವ್ ಹೇಟರ್ಸ್' ಅಂತ ಫೇಸ್ಬುಕ್ಕು ಮತ್ತು ವಾಟ್ಸಾಪ್ ಗ್ರೂಪ್ ಕ್ರಿಯೇಟ್ ಮಾಡು. ನಮ್ಮ ಪ್ರತಿಭಟನೆ ವೈರಲ್ ಆಗ್ಬೇಕು. ಹೇಯ್ ಸುನಿಲ್, ನೀ ಆರ್ಟಿಸ್ಟ್ ಅಲ್ವಾ? ಕೆಲವು ಪೋಸ್ಟರ್ಸ್ ರೆಡಿ ಮಾಡು. ಚೈತ್ರಾ, ನೀ ಕವನ–ಗಿವನ ಬರೀತಿಯಲ್ಲಾ... ಕ್ಯಾಚೀ ಲೈನ್ಸ್ ಬರೀ... ಲೈಕ್ – 'ಪ್ರೀತ್ಸೋದ್ ತಪ್ಪಲ್ಲ', 'ಪ್ರೀತಿ ಪ್ರೇಮ ಪ್ರಣಯ, ಇದು ಯುವ ಮನಸ್ಸುಗಳ ವಿಷಯ', 'ಯುವ ಭಾವನೆಗಳನ್ನು ಅರ್ಥ ಮಾಡಿಕೊಳ್ಳಿ, ಪ್ರೀತಿ ಪ್ರೇಮಕ್ಕೆ ಇಡಬೇಡಿ ಕೊಳ್ಳಿ...' ಹೀಗೆ ಇನ್ನಷ್ಟು ಲೈನುಗಳನ್ನ ಬರಿ' ಎಂದು ಎದ್ದು ನಿಂತ. ರೋಹಿತನ ಭಾಷಣದಂಥ ಮಾತಿಗೆ ಎಲ್ಲರ ಮೈ ಬೆಚ್ಚಗಾಗಿತ್ತು. ಹೋಗುವಾಗ 'ಹೇ ಪ್ರೀತ್ ನನ್ಮಗನೇ, ನಿನ್ ಘಾಟಿ ಮಿರ್ಚಿಗೂ ಕರಿ... ಅವಳಿದ್ರೆ ನಮಗೂ ಸ್ಫೂರ್ತಿ ಬರೂದ' ಎಂದು ನಗುತ್ತಾ ಅಲ್ಲಿಂದ ಬಿರುಸಾಗಿ ಹೊರನಡೆದ. ಉಳಿದವರು ಒಬ್ಬೊಬ್ಬರಾಗಿ ವಿದಾಯ ಹೇಳಿದರು.

ಪ್ರೀತಂ ಆಯಿಯ ಮೊಬೈಲ್ ಇನ್ನೊಮ್ಮೆ ನೋಡಿದ. ಮೊನ್ನೆಯ ಘಟನೆಯ ಸಮಯದಲ್ಲಿ ಇವನ ಮೊಬೈಲ್ ಎಲ್ಲೋ ಬಿದ್ದುಹೋಗಿದ್ದರಿಂದ ಆಯಿಯ ಮೊಬೈಲ್ ಬಳಸುತ್ತಿದ್ದ. ಸುಮಿಗೆ ಕಳುಹಿಸಿದ ಮೆಸೇಜುಗಳ ಡೆಲಿವರಿ ಆಗಿರಲಿಲ್ಲ. ವಾಟ್ಸಾಪ್ ಕರಿ ಟಿಕ್ಕು ನೀಲಿಯಾಗಿರಲಿಲ್ಲ, ಮೊನ್ನೆಯಿಂದಲೂ! 'ನಾಳೆ ಬರುವೆ ಪ್ರೀತ್, ಟೇಕ್ ಕೇರ್, ಲವ್ಯೂ' ಎಂದು ಎಲ್ಲರೆದುರೇ ಹೇಳಿ ಹೋದವಳು ಮತ್ತೆ ನೋಡಲು ಬರದಿರುವುದು ಪ್ರೀತಂನ ಚಿಂತೆಗೆ ಕಾರಣವಾಗಿತ್ತು. ಬರುವುದು ಬೇಡ, ಕಾಲ್ ಕೂಡ ಕನೆಕ್ಟ್ ಆಗ್ತಿಲ್ಲ. ಒಮ್ಮೆ ಸ್ವಿಚ್ಡ್ ಆಫ್ ಎಂದು, ಇನ್ನೊಮ್ಮೆ ನೆಟ್‌ವರ್ಕ್ ಹೊರಗಿದೆ ಎಂದೂ, ಮತ್ತೊಮ್ಮೆ ಈ ನಂಬರ್ ಅಸ್ತಿತ್ವದಲ್ಲಿಲ್ಲ ಎಂದು ಒದರುತ್ತಿತ್ತು. ಪ್ರೀತಂನಿಗೆ ಏನೋ ಆಗಬಾರದ್ದು ಆಗಿದೆ ಅನಿಸುತ್ತಿತ್ತು. ಮಗ ನಿದ್ದೆಯಿಲ್ಲದೇ ಹಾಸಿಗೆಯಲ್ಲಿ ಚಡಪಡಿಸುವುದನ್ನು ಗುಲಾಬಿಯೂ ಗಮನಿಸಿದ್ದಳು. ಈಗ ನಿದ್ದೆ ಬೀಳಬಹುದು, ಆಗ ನಿದ್ದೆ ಬೀಳಬಹುದು ಎಂದು ಕಾದು ತಾನೂ ಕಣ್ಣುರೆಪ್ಪೆ ತೆರೆದೇ ಮಲಗಿದ್ದಳು. ಮಗನ ತಲೆ ಗಾಯಕ್ಕಿಂತ ಹೆಚ್ಚಿನ ನೋವು ಆತನ ಎದೆ ಮೇಲಿದೆ ಅನ್ನುವುದು ಅವಳ ಕರುಳಿಗೆ ಅರಿವಾಗಿತ್ತು.

'ಮಗ, ನೋಯ್ತಿದ್ಯಾ?' ಎಂದಳು. 'ಕಷಾಯ ಮಾಡ್ಕೊಡ್ಲಾ?' ಅಂದಳು. ಪ್ರೀತಂ ಹಾಸಿಗೆಯಿಂದೆದ್ದು 'ಆಯಿ ಬ್ಯಾಗ್ ಬತ್ತಿ, ನೀ ಮನಿಕ್ಕಾ' ಎಂದ. 'ಅಯ್ಯೋ ಈ ರಾತ್ರಿಗೆಂತಕೆ ಹೋತ್ಯೋ ಮಗ?' ಅಂದಳು. ಬಾಗಿಲು ತೆಗೆದು